ತಿಮಿಂಗಿಲು – ದೈತ್ಯಾಕಾರದ ಸಾಧು ಪ್ರಾಣಿ

ಜಾಯಸ್ ಮಿಲ್ಟನ್
ಚಿತ್ರಗಳುಃ ಅಲ್ಬನ್ ಲಾಂಗಪೋರ್ಡ

ತಿಮಿಂಗಿಲು – ದೈತ್ಯಾಕಾರದ ಸಾಧು ಪ್ರಾಣಿ

ಜಾಯಸ್ ಮಿಲ್ಟನ್
ಚಿತ್ರಗಳುಃ ಅಲ್ಟನ್ ಲಾಂಗಪೋರ್ಡ

ಕನ್ನಡಕ್ಕೆ ಪ್ರಭಾಕರ ನಾನಾವಟಿ



ನೂರಾರು ವರುಷಗಳಿಂದ ಜನರು ಸಮುದ್ರ ರಾಕ್ಷಸದ, ಸಮುದ್ರ ದೈತ್ಯದ ಅಸ್ತಿತ್ವವನ್ನು ನಂಬಿದ್ದಾರೆ. ಸಮುದ್ರದಲ್ಲಿ ವಾಸಿಸುವ ಎಷ್ಟೋ ರೀತಿಯ ವಿಕ್ರಾಳ ರೂಪದ ಪ್ರಾಣಿಗಳ ಕತೆ ಹೇಳುತ್ತ ಬಂದಿದ್ದಾರೆ.

ಒಂದು ಕತೆಯಲ್ಲಿ ಬ್ರೆಂಡನ್ ಮತ್ತು
ಅವನ ಸಂಗಡಿಗರು ಒಂದು ಚಿಕ್ಕ
ನೌಕೆಯಲ್ಲಿ ಕುಳಿತು ಸಮುದ್ರ
ಪ್ರಯಾಣಕ್ಕೆ ಹೊರಡುತ್ತಾರೆ. ಹಾಯಿ
ಕಟ್ಟಿದ ಈ ನೌಕೆಯಲ್ಲಿ ಕುಳಿತು
ಸಮುದ್ರದಲ್ಲಿ ಸಾಕಷ್ಟು ದೂರ
ಹೋಗುತ್ತಾರೆ. ಆದರೆ ಅವರು ದಾರಿ
ತಪ್ಪುತ್ತಾರೆ.

ಅಷ್ಟರಲ್ಲಿ ಅವರಿಗೆ ಒಂದು
ನಡುಗಡ್ಡೆ ಕಾಣುತ್ತದೆ. ‘ನಾವು
ಬದುಕಿದೆವು’ ಎಂದು ಬ್ರೆಂಡನ್
ಆನಂದದಿಂದ ಹೇಳುತ್ತಾನೆ,
‘ಇದೆಲ್ಲ ಈ ದೇವರ ಕೃಪೆ.’

ಬ್ರೆಂಡನ್ ಮತ್ತು ಅವರ ಸಂಗಡಿಗರು
ದೇವರ ಪ್ರಾರ್ಥನೆ ಮಾಡುತ್ತಾರೆ.
ಆದರೆ ಈ ನಡುಗಡ್ಡೆ ಚಲಿಸಲು
ಪ್ರಾರಂಭಿಸುತ್ತದೆ. ಅದು
ಜೀವಂತವಾಗಿದೆ. ಇದು ಸಮುದ್ರ
ರಾಕ್ಷಸ ಇರಬಹುದೇ? ಇಲ್ಲ!
ಇವರೆಲ್ಲರು ತಿಮಿಂಗಿಲಿನ ಬೆನ್ನಿನ
ಮೇಲೆ ನಿಂತಿದ್ದರು! ಅವರೆಲ್ಲ ಅಂಜಿ
ಜಿಗಿದು ಮತ್ತೇ ತಮ್ಮ ನೌಕೆಯಲ್ಲಿ
ಕುಳಿತು ಎಷ್ಟು ವೇಗವಾಗಿ
ಹೋಗಬಹುದೋ ಅಷ್ಟು ವೇಗದಿಂದ
ದೂರ ಹೋದರು.

ಇದು ನಿಜವಾದ ಕತೆಯೇ? ಇರಲಿಕ್ಕಿಲ್ಲ. ಆದರೆ ಕೆಲ ತಿಮಿಂಗಿಲುಗಳು ಚಿಕ್ಕ ನಡುಗಡ್ಡೆಯಷ್ಟಿರುತ್ತವೆ, ಎಂಬುದು ಸುಳ್ಳಲ್ಲ. ನೀಲ ತಿಮಿಂಗಿಲು ಎಲ್ಲ ತಿಮಿಂಗಿಲುಗಳಿಗಿಂತ ಅತೀ ದೊಡ್ಡದು.

ಜಗತ್ತಿನಲ್ಲಿಯ ಎಲ್ಲ ಪ್ರಾಣಿಗಳಿಗಿಂತಲೂ ಇದು ದೊಡ್ಡ ಪ್ರಾಣಿ. ಮರಿ ತಿಮಿಂಗಿಲು ಆನೆಗಿಂತಲೂ ದೊಡ್ಡದು.



ಸುಮಾರು 75ಕ್ಕಿಂತ ಹೆಚ್ಚು ಪ್ರಕಾರದ ತಿಮಿಂಗಿಲು ಗಳಿವೆ. ಕೊಲೆಗಡುಕ ತಿಮಿಂಗಿಲ (Killer whale), ತಂಡೇಲ ತಿಮಿಂಗಿಲ (pilot whale), ಸೊರ ತಿಮಿಂಗಿಲ (shark whale) , ಚೌಕ ತಲೆ ತಿಮಿಂಗಿಲ (sperm whale) ಮುಂತಾದ ಪ್ರಕಾರಗಳಿವೆ. ಚೌಕ ತಲೆ (ಚೌದಲೆ) ತಿಮಿಂಗಿಲಿನ ತಲೆ ಬೃಹದಾಕಾರದ್ದು.



ಗಂಡು ಮತ್ಸ್ಯ ಶೃಂಗಿಗೆ (narwhal) ಒಂದು ಉದ್ದವಾದ, ಡೊಂಕಾದ ಹಲ್ಲು ಇರುತ್ತದೆ.ಎಷ್ಟೋ ಸಲ ಇದು 10 ಅಡಿಯಷ್ಟು ಬೆಳೆಯಬಹುದು !

ಪಿಗ್ಮಿ ಸ್ಪರ್ಮ ತಿಮಿಂಗಿಲು ಈ ಜಾತಿಯಲ್ಲಿಯ ಎಲ್ಲಕ್ಕಿಂತ ಚಿಕ್ಕ ತಿಮಿಂಗಿಲು. ಅದರ ಆಕಾರ ಒಂದು ದೊಡ್ಡ ನೌಕೆಯಷ್ಟಿರಬಹುದು!

ಜನರಿಗೆ ತಿಮಿಂಗಿಲು ಇದು ಒಂದು ಪ್ರಕಾರದ ಮತ್ಸ್ಯ ವರ್ಗದ ಪ್ರಾಣಿ ಎಂದೆನ್ನಿಸುತ್ತಿದೆ. ಆದರೆ ಅದು ಮೀನಿನ ಜಾತಿಯ ಪ್ರಾಣಿ ಅಲ್ಲ. ಅದು ಬಹಳ ಹೊತ್ತು ಸಮುದ್ರದಾಳದ ನೀರಿನಲ್ಲಿ ಇರಲು ಸಾಧ್ಯವಿಲ್ಲ.

ತಲೆಯ ಮೇಲಿನ ಒಂದು ಛಿದ್ರದಿಂದ ಅದು ಉಸಿರಾಡಿಸುತ್ತದೆ. ಅದಕ್ಕೆ ಬ್ಲೋಹೋಲ (**blowhole**) ಎಂದು ಹೆಸರು. ತಿಮಿಂಗಿಲು ನೀರಿನಲ್ಲಿ ಧುಮುಕಿಸುವಾಗ ತನ್ನ ಉಸಿರನ್ನು ಒಳಗೆ ಹಿಡಿದಿಡುತ್ತದೆ ಮತ್ತು ನೀರಿನಿಂದ ಹೊರಬಂದಾಗ ಉಸಿರು ಹೊರಬಿಡುತ್ತದೆ. ನಿಟ್ಟುಸಿರು ಬಿಟ್ಟಾಗ ಆ ಛಿದ್ರದಿಂದ ಕಾರಂಜಿಯಂತೆ ನೀರು ಹವೆಯಲ್ಲಿ ರಭಸದಿಂದ ಬೀಳುತ್ತದೆ.

ತಿಮಿಂಗಿಲು ಸಸ್ತನಿ ಪ್ರಾಣಿ. ನಾಯಿಗಳಂತೆ, ಬೆಕ್ಕುಗಳಂತೆ, ನಮ್ಮ ನಿಮ್ಮಂತೆ. ತಿಮಿಂಗಿಲಿನ ಮರಿಯು ತಾಯಿಯ ಹೊಟ್ಟೆಯಲ್ಲಿ ಬೆಳೆಯುತ್ತದೆ. ಬೂದಿ ಬಣ್ಣದ ಮರಿಯು ತಾಯಿಯ ಹೊಟ್ಟೆಯಿಂದ ಹೊರಬಂದಾಗ ತಾಯಿ ಮತ್ತು ಅದರ ಜತೆಯ ತಿಮಿಂಗಿಲು ಅದನ್ನು ರಭಸದಿಂದ ನೀರಿನ ಮೇಲೆ ನೂಕುತ್ತವೆ. ಇವು ಆ ಮರಿಗೆ ಉಸಿರಾಡಿಸಲು ಸಹಾಯ ಮಾಡುತ್ತವೆ.

ಮರಿ ತಿಮಿಂಗಿಲು ಆಕಳ ಕರುವಿನಂತೆ ಇರುತ್ತದೆ. ಮನುಷ್ಯರ ಕೂಸಿನಂತೆ ಇದು ತಾಯಿಯ ಮೊಲೆ ಹಾಲು ಕುಡಿಯುತ್ತದೆ. ಅದರ ತೂಕ 1000 ಕೇಜಿಯಷ್ಟಿರುತ್ತದೆ. ತಾಯಿಗೆ ಮಾತ್ರ ಅದು ಇನ್ನು ಕೂಸೆ!

ಸಾಮಾನ್ಯವಾಗಿ ತಿಮಿಂಗಿಲು ಸಾಧು ಪ್ರಾಣಿ. ಆದರೆ ಕೆಲ ಸಲ ಅದು ರೊಚ್ಚಿಗೇಳಬಹುದು. ತನ್ನ ಮರಿಗೆ ಗಾಯವಾಗಬಾರದೆಂದು ಅದು ಯಾರ ಮೇಲೂ ದಾಳಿ ಮಾಡಬಹುದು.





ಮರಿ ತಿಮಿಂಗಿಲಿಗೆ ವೇಗದಿಂದ ಈಸಲು ಬರುವದಿಲ್ಲ. ಹಸಿವೆಯಿಂದ ಬಳಲುತ್ತಿರುವ ಬಿಳಿಯ ಸೊರ ಮೀನು (shark) ಆ ಮರಿಯ ಮೇಲೆ ಕಣ್ಣಿಟ್ಟಿದೆ. ಅದು ದಾಳಿ ಮಾಡಲು ಹೊಂಚು ಹಾಕುತ್ತಲಿದೆ.

ಆದರೆ ಅದರ ತಾಯಿ
ಕೂಡ ಜಾಗ್ರತೆಯಿಂದ
ತನ್ನ ಮರಿಯನ್ನು
ಕಾಯುತ್ತಲಿದೆ.



ಅದು ಶಾರ್ಕನ್ನು ನೋಡಿದ ಕ್ಷಣ
ನೇರವಾಗಿ ಅದನ್ನು ಎದುರಿಸುತ್ತದೆ.

ಸುತ್ತಮುತ್ತಲಿನ ಬೂದಿ ಬಣ್ಣದ
ತಿಮಿಂಗಿಲುಗಳು ತಾಯಿ ಮತ್ತು
ಮರಿಯ ಸಹಾಯಕ್ಕೆ ಬರುತ್ತವೆ.
ಶಾರ್ಕ ಅವೆಲ್ಲವುಗಳನ್ನು
ಎದುರಿಸಲು ಸಾಧ್ಯವಿಲ್ಲ.

ಶಾರ್ಕ ಅಷ್ಟೊಂದು ಚುರುಕು ಪ್ರಾಣಿ
ಅಲ್ಲ. ಅದು ಗೊಂದಲಕ್ಕೆ
ಈಡಾಗಿದ್ದರಿಂದ ಈಸುತ್ತ ದೂರ
ಹೋಗುತ್ತದೆ. ಮರಿ ತಿಮಿಂಗಿಲು
ಸುರಕ್ಷಿತ.



ಚಳಿಗಾಲದಲ್ಲಿ ಬೂದಿ ಬಣ್ಣದ ಮರಿ
ತಿಮಿಂಗಿಲು ಮೆಕ್ಸಿಕೊ ಹತ್ತಿರದ
ಸಮುದ್ರದ ಬಿಸಿ ನೀರಲ್ಲಿ
ಚೆಲ್ಲಾಟವಾಡುತ್ತದೆ. ಆದರೆ
ಬಿಸಿಲುಗಾಲದಲ್ಲಿ ತಿಮಿಂಗಿಲುಗಳು
ಆರ್ಕ್ಟಿಕ್ ಮಹಾಸಾಗರದತ್ತ
ಪ್ರಯಾಣ ಮಾಡುತ್ತವೆ. ಚಿಕ್ಕ
ಮರಿಗಳು ಕೂಡ ಈ ದೂರದ
ಪ್ರಯಾಣ ಮಾಡಲು
ಅಂಜುವದಿಲ್ಲ.



ದಿನ-ರಾತ್ರಿ ಅವು ಈ ಪ್ರಯಾಣದಲ್ಲಿ ಈಸುತ್ತವೆ. ಪಾಪ! ಅವುಗಳಿಗೂ ಕೂಡ ದಣಿವು ಆಗುತ್ತದೆ. ಆಗ ಅವು ನೀರಿನ ಮೇಲೆ ಬಂದು ಒಂದು ಜೊಂಪು ನಿದ್ದೆಯನ್ನು ಮಾಡುತ್ತವೆ.

ಈ ದೂರದ ಪಯಣದ ನಂತರ ಅವುಗಳಿಗೆ ಹಸಿವೆಯಾಗುತ್ತದೆ. ಈ ತಣ್ಣಗಿನ ಮಹಾಸಾಗರದಲ್ಲಿ ನೀರಿನಲ್ಲಿ ವಾಸಿಸುವ ಸಾಗರದ ಜಂಗಮ ಜೀವಿಗಳು ಸಾಕಷ್ಟು ಪ್ರಮಾಣದಲ್ಲಿ ಇವೆ. ಅವೆಲ್ಲ ಬಹು ಚಿಕ್ಕ ಚಿಕ್ಕ ಸೂಕ್ಷ್ಮ ಜೀವಿಗಳು. ಇಂತಹ ಜೀವಿಗಳು ತಿಮಿಂಗಿಲಿನ ಆಹಾರ ಎಂಬುದನ್ನು ಯಾರೂ ನಂಬಲು ಸಾಧ್ಯವಿಲ್ಲ. ಆದರೆ ಮುಖ ತೆರೆದು ಬಾಯಿ ಚಪ್ಪರಿಸುತ್ತ ಅವುಗಳನ್ನು ತಿಮಿಂಗಿಲುಗಳು ಹೊಟ್ಟೆ ಬಿರಿಯುವಷ್ಟು ತಿನ್ನುತ್ತವೆ. ಅವುಗಳಿಗೆ ಸಾಕಷ್ಟು ನೀರು ಕೂಡ ಬೇಕು. ಚಿಕ್ಕ ಸಮುದ್ರ ಪ್ರಾಣಿಗಳಿಗೂ ಕೂಡ ಕುಡಿಯಲು ನೀರು ಬೇಕು.

ತಿಮಿಂಗಿಲುಗಳಿಗೆ ಕಡಿದು ತಿನ್ನಲು ಹಲ್ಲುಗಳಿಲ್ಲ. ಹಲ್ಲುಗಳ ಬದಲಾಗಿ ಹಣಿಗೆಯಂತಹ ಜರಡೆಯಿಂದ ಸೂಸಿ ಸಮುದ್ರಜೀವಿಗಳನ್ನು ನುಂಗುತ್ತವೆ. ಈ ಜರಡು ಸಾಕಷ್ಟು ಉದ್ದವಾಗಿ ಬೆಳೆದಿರುತ್ತದೆ. ತಿಮಿಂಗಿಲು ಬಾಯಿಯಲ್ಲಿಯ ನೀರನ್ನು ಉಗುಳಿದಾಗ ಅದೆಷ್ಟೋ ಜೀವಿಗಳು ಈ ಜರಡೆಯ ಸಂದಿನಲ್ಲಿ ಸಿಕ್ಕಿಬಿಟ್ಟಿರುತ್ತವೆ. ಇವೇ ಅವುಗಳ ರಾತ್ರಿಯ ಊಟ.

ಸಮುದ್ರದ ದಂಡೆಗೆ ವಾಸಿಸುವ
ನಾವಿಕರಿಗೆ ಈ ಮೊದಲು
ತಿಮಿಂಗಿಲುಗಳು ಒಂದು ರೀತಿಯ
ದನಿ ಮಾಡುತ್ತವೆ ಎಂಬುದು
ಗೊತ್ತಿರಲಿಲ್ಲ. ಸಮುದ್ರದಾಳದ
ನೀರಿನಲ್ಲಿ “ಕ್ಲಿಕೆಟಿ-ಕ್ಲಿಕ್ ಕ್ರ್ಯಾಕ್ “
ಎಂಬ ದನಿಯನ್ನು ಅವರು
ಕೇಳುತ್ತಿದ್ದರು.



ಈ ದನಿಯು ಆಕಾಶದಿಂದ ಬಂದ
ಸಂಗೀತದಂತೆ ಇತ್ತು.
ತಿಮಿಂಗಿಲುಗಳೇ ಈ ಸಂಗೀತವನ್ನು
ಹಾಡುತ್ತವೆ ಎಂಬ ಸಂಗತಿ
ನಾವಿಕರಿಗೆ ಬಹಳ ದಿನಗಳಾದ
ಮೇಲೆ ತಿಳಿದು ಬಂತು.





ಗೂನು ಬೆನ್ನಿನ (Humpback) ತಿಮಿಂಗಿಲುಗಳು ಉಳಿದೆಲ್ಲ ತಿಮಿಂಗಿಲುಗಳಿಗಿಂತ ವಿಚಿತ್ರವಾದ ದನಿಯಲ್ಲಿ ಹಾಡುತ್ತವೆ. ಈ ತಿಮಿಂಗಲುಗಳು ನೋಡಲಿಕ್ಕೆ ಬಹಳ ವಿದ್ರೂಪದ ಪ್ರಾಣಿಗಳು. ತಲೆ ಎಲ್ಲ ಬುಗುಟೆಗಳಿಂದ ತುಂಬಿದೆ. ಆದರೆ ಅವುಗಳ ದನಿ ಇಂಪಾದದ್ದು.

ಎಷ್ಟೋ ವಿಜ್ಞಾನಿಗಳು ಗೂನು ಬೆನ್ನಿನ ತಿಮಿಂಗಿಲುಗಳ ದನಿಯ ರೆಕಾರ್ಡು ಮಾಡಿಟ್ಟಿದ್ದಾರೆ. ಆದರೆ ಆ ಹಾಡುಗಳ ಅರ್ಥವೇನು? ಇನ್ನೂವರೆಗೂ ಅದು ತಿಳಿದಿಲ್ಲ.

ಕರಿ-ಬಿಳಿ ಬಣ್ಣದ ಓರ್ಕಾ ತಿಮಿಂಗಿಲು ನೋಡಲಿಕ್ಕೆ ಚೆಂದದ ಪ್ರಾಣಿ. ಅದಕ್ಕೆ ಉಳಿದ ತಿಮಿಂಗಿಲುಗಳಂತೆ ಬಾಯಿಯಲ್ಲಿ ಜರಡು ಇಲ್ಲ. ಆದರೆ ಪ್ರಚಂಡ ಆಕಾರದ ಹಲ್ಲುಗಳಿವೆ! ಓರ್ಕಾ ದೊಡ್ಡ ಮೀನುಗಳ ಬೇಟೆಯಾಡಬಹುದು. ಓರ್ಕಾ ತನ್ನ ಜಾತಿಯ ಕೊಲೆಗಡುಕ ತಿಮಿಂಗಿಲುಗಳನ್ನು ಕೂಡ ಎದುರಿಸಬಹುದು. ನಾವಿಕರು ಇವುಗಳಿಗೆ ಬಹಳ ಅಂಜುತ್ತಾರೆ.

ಓರ್ಕಾ ತಿಮಿಂಗಿಲುಗಳನ್ನು ನಾವು ಸಾಕಬಹುದು ಎಂಬ ಸಂಗತಿ ಈಗ ತಿಳಿದಿದೆ.ಅದೆಷ್ಟೋ ಮತ್ಸ್ಯಾಲಯಗಳಲ್ಲಿ ಇವುಗಳನ್ನು ಪ್ರದರ್ಶನಕ್ಕಾಗಿ ಇಟ್ಟಿದ್ದನ್ನು ನೀವು ಕಾಣಬಹುದು. ಅವುಗಳಿಗೆ ಮನುಷ್ಯರ ಸಂಪರ್ಕ ಹಿಡಿಸುತ್ತದೆ. ಇವು ಬಹಳ ಜಾಣ ಪ್ರಾಣಿಗಳು. ಹೊಸ ಹೊಸ ಮೋಜಿನ ಆಟಗಳನ್ನು ಅವು ಆಡುತ್ತವೆ. ತಂತ್ರಗಳನ್ನು ಕಲಿಯುತ್ತವೆ. ತರಬೇತುದಾರರಿಗೆ ಕೂಡ ಗೊತ್ತಿರದ ತಂತ್ರಗಳನ್ನು ಅವು ಮಾಡಿ ತೋರಿಸುತ್ತವೆ.

ಓರ್ಕಾಗಳು ಮನುಷ್ಯರಿಗೆ ಗಾಯ ಮಾಡುವದಿಲ್ಲ. ಆದರೆ ಜನರು ಅನಾದಿ ಕಾಲದಿಂದ ತಿಮಿಂಗಿಲುಗಳ ಬೇಟೆಯಾಡುತ್ತ, ಅವುಗಳನ್ನು ಕೊಲ್ಲುತ್ತ ಬಂದಿದ್ದಾರೆ. ಹೀಗೇಕೆ? ಬೇಟೆಯಾಡುವವರಿಗೆ ತಿಮಿಂಗಿಲುಗಳ ಕೊಬ್ಬಿನ ಮೇಲೆ ಕಣ್ಣು. ಇದರಿಂದ ಎಣ್ಣೆಯನ್ನು ತಯಾರಿಸಬಹುದು. ಈ ಎಣ್ಣೆಯನ್ನುಪಯೋಗಿಸಿ ಮನೆ ಮನೆಗಳಲ್ಲಿ ದೀಪಗಳನ್ನು ಹಚ್ಚುತ್ತಿದ್ದರು. ನಾವಿಕರು ತಿಂಗಳುಗಟ್ಟಲೆ ಇವುಗಳನ್ನು ಶೋಧಿಸಿ ಬೇಟೆಯಾಡುತ್ತಿದ್ದರು.

ಉತ್ತರ ಧೃವದ ಹತ್ತಿರದ
ಸಮುದ್ರದಲ್ಲಿ ಚಳಿಗಾಲದಲ್ಲಿ
ತಿಮಿಂಗಿಲುಗಳು ಹೋಗುವವು
ಎಂಬುದು ಗೊತ್ತಾದ ಮೇಲೆ
ಶಿಕಾರಿಗಳು ತಿಮಿಂಗಿಲುಗಳ
ಬೇಟೆಯಾಡಲು ಉತ್ತರದ
ಮಹಾಸಾಗರಕಡೆ ಹೋಗುವರು.
ಎಷ್ಟೋ ಸಲ ಅವರ ನೌಕೆ ಹಿಮದಲ್ಲಿ
ಸಿಕ್ಕಿ ಬೀಳುವದು. ಅವರು ಮರಳಿ
ತಮ್ಮ ಮನೆಗಳಿಗೆ ಬರಲಾರರು.

ತಿಮಿಂಗಿಲುಗಳ ಬೇಟೆ ಬಹು
ಅಪಾಯಕಾರಿ ಕೆಲಸ. ಚಿಕ್ಕ ನೌಕೆಗಳಲ್ಲಿ
ಅವರು ತಿಮಿಂಗಿಲನ್ನು ಹಿಂಬಾಲಿಸುವರು.
ಅವರ ಹತ್ತಿರವಿದ್ದ ಚೂಪಾದ
ಬಾಣದಂತಿರುವ ಹಾರ್ಪೂನ
(harpoons) ಗಳನ್ನು ತಿಮಿಂಗಿಲಿನ
ಬೆನ್ನಿನ ಮೇಲೆ ಒಗೆಯುವರು.
ತಿಮಿಂಗಿಲು ತನ್ನ ಜೀವವಿರುವವರೆಗೂ
ಅವರಿಂದ ಪಾರಾಗಲು ಪ್ರಯತ್ನಿಸುತ್ತದೆ.

ಗಾಯಗೊಂಡ ತಿಮಿಂಗಿಲು
ಇಡೀ ನೌಕೆಯನ್ನು
ಉರುಳಿಸಿ ತಿರುವು
ಮುರುವು ಮಾಡಬಹುದು.

ಇಲ್ಲಿವರೆಗೆ ದೊಡ್ಡ ಪ್ರಮಾಣದಲ್ಲಿ ತಿಮಿಂಗಿಲುಗಳ ಶಿಕಾರಿ ಮಾಡಿ ಕೊಲ್ಲಲಾಗಿದೆ. ಈಗ ಬಹಳೇ ಕಡಿಮೆ ತಿಮಿಂಗಿಲುಗಳು ಉಳಿದಿವೆ. ಅವು ಅಳಿದು ಹೋಗಬಾರದೆಂದು ಜನರಿಗೆ ಕಾಳಜಿ ಉಂಟಾಗಿದೆ.ಅವುಗಳ ರಕ್ಷಣೆ ಮಾಡಬೇಕಾಗಿದೆ.ಎಷ್ಟೋ ದೇಶಗಳಲ್ಲಿ ಅವುಗಳ ರಕ್ಷಣೆಗಾಗಿ ಕಾನೂನುಗಳನ್ನು ಮಾಡಲಾಗಿದೆ. ಈಗ ಅವುಗಳನ್ನು ದೂರದಿಂದಲೇ ನೋಡುವ, ವಿಕ್ಷಿಸುವ, ಕಟ್ಟಳೆಗಳನ್ನು ಪಾಲಿಸಿದರೆ ಅವುಗಳ ಪೀಳಿಗೆ ಉಳಿಯಬಹುದು. ಇಲ್ಲವಾದರೆ ಅವು ನಿರ್ವಂಶವಾಗಬಹುದು.

ವಿಜ್ಞಾನಿಗಳು ಅವು ಸಮುದ್ರದಲ್ಲಿ ಹೇಗೆ ಜೀವಿಸುತ್ತವೆ ಎಂಬುದನ್ನು ಕಲಿಯುತ್ತಲಿದ್ದಾರೆ. ಅವುಗಳ ವೀಕ್ಷಣೆ ಒಂದು ರೀತಿಯ ಮೋಜು. ತಿಮಿಂಗಿಲುಗಳು ಕೂಡ ಮನುಷ್ಯರ ವೀಕ್ಷಣೆ ಮಾಡುತ್ತವೆ. ನೌಕೆಯ ಸುತ್ತಲು ಅವು ಬಹಳಷ್ಟು ವೇಳೆ ಸುತ್ತು ಹಾಕುತ್ತಿರುತ್ತವೆ.

ನೀವು ಅವುಗಳ ವೀಕ್ಷಣೆ ಮಾಡುತ್ತಿದ್ದರೆ ಅದೆಷ್ಟೋ ಸಲ ಅವು ಸಮುದ್ರದಿಂದ ಮೇಲೆ ಹವೆಯಲ್ಲಿ ಹತ್ತಾರು ಅಡಿ ಹಾರಿ ನೀರು ಸೇರುವವು. ಅವು ಹೀಗೇಕೆ ಮಾಡುತ್ತವೆ? ಯಾರಿಗೂ ಗೊತ್ತಿಲ್ಲ. ಹಾರಾಟದಿಂದ ಅವುಗಳಿಗೆನೇ ಆನಂದವಾಗುತ್ತಿರಬಹುದು!

ಸಮಾಪ್ತಿ